ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ತೊಗರಿಬೆಳೆ ನಾಶವಾಗಿರುವುದರಿಂದ ರೈತರಿಗೆ ಪರಿಹಾರ.

1093 (1149): ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್):–

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗುಲ್ಬರ್ಗಾ ಹಾಗೂ ಬೀದರ್ ಜಿಲ್ಲೆಗಳಲ್ಲಿ ತೊಗರಿ ಬೆಳೆ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಈ ಎರಡು ಜಿಲ್ಲೆಯ ರೈತರಿಗೆ ಪರಿಹಾರವನ್ನೇನಾದರೂ ವಿತರಣೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳಲಾಗಿದೆಯೇ;

ಇ. ಹಾಗಿದ್ದಲ್ಲಿ, ಇದುವರೆವಿಗೂ ಎರಡು ಜಿಲ್ಲೆಗಳಿಗೂ ಪ್ರತಿ ಎಕರೆಗೆ ನೀಡಲಾದ ಪರಿಹಾರದ ಮೊತ್ತವೆಷ್ಟು: (ಪದರಿ ಜಿಲ್ಲೆಗಳ ಪ್ರತ್ಯೇಕ ವಿವರಗಳನ್ನು ನೀಡುವುದು) ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಸಚಿವರು):–

ಅ. ಬಂದಿದೆ.

ಆ. ರೈತರಿಗೆ ಈಗ ನೇರವಾಗಿ ಪರಿಹಾರವನ್ನು ನೀಡಲು ಯಾವುದೇ ಪ್ರಸ್ತಾವನೆಯಿಲ್ಲದಿದ್ದರೂ, ಪರೋಕ್ಷವಾಗಿ ನೆರವು ನೀಡಲು ಒಂದು ಸಮಗ್ರ ಕಿರು ಚೀಲವನ್ನು ಮುಂದಿನ ಮುಂಗಾರು ಹಂಗಾಮಿನಲ್ಲಿ ಕೊಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ಇ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಬೆಳೆದ ವಿವಿಧ ಎಣ್ಣೆಕಾಳು ಬೆಳೆಗಳು ಮತ್ತು ಉತ್ಪಾದಿಸಿದ ಎಣ್ಣೆ.

1094 (1137): ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ):–

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1991–92 ಮತ್ತು 92–93ರ (ಡಿಸೆಂಬರ್ 92ರ ವರೆಗೆ) ರಾಜ್ಯದಲ್ಲಿ ಬೆಳೆದ ವಿವಿಧ ಎಣ್ಣೆ ಕಾಳು ಬೆಳೆಗಳು ಮತ್ತು ಉತ್ಪಾದಿಸಿದ ಎಣ್ಣೆ (ಸವಿವರ ಮಾಹಿತಿಯನ್ನು ಒದಗಿಸುವುದು);

ಆ. ಎಣ್ಣೆಕಾಳು ಬೆಳೆಗಾರರಿಗೆ ಸರ್ಕಾರ ನೀಡಿರುವ ಸೌಲಭ್ಯಗಳು.

ಇ. ಮೇಲ್ಕಾಣಿಸಿರುವ ಅವಧಿಗಳಲ್ಲಿ ಎಣ್ಣೆಕಾಳು ಬೆಳೆಗಾರರಿಗೆ ಸೌಲಭ್ಯಗಳನ್ನು ಒದಗಿಸಲು ಕೇಂದ್ರ ಸರ್ಕಾರ ನೀಡಿರುವ ಮೊತ್ತ ?

ಅ. 1991–92 ಮತ್ತು 92–93ರ ಸಾಲಿನಲ್ಲಿ ಎಣ್ಣೆಕಾಳು ಬೆಳೆಗಳಾದ ನೆಲಗಡಲೆ, ಸೂರ್ಯ ಕಾಂತಿ, ಕುಸುಬೆ, ಎಳ್ಳು, ಸೋಯಾ ಅವರೆ, ಹುಚ್ಚೆಳ್ಳು, ಹರಳು, ಆಗಸೆ ಮತ್ತು ಸಾಸುವೆ ರಾಜ್ಯದಲ್ಲಿ ಬೆಳೆಸಲಾಗಿತ್ತು. 1991–92 ಮತ್ತು 92–93ರ ಸಾಲಿನಲ್ಲಿ ಎಣ್ಣೆ ಪ್ರಮಾಣ ಮತ್ತು ರಾಜ್ಯದಲ್ಲಿ ಉತ್ಪಾದಿಸಿದ ಎಣ್ಣೆಯ ವಿವರಗಳು ಈ ಕೆಳಕಂಡಂತಿದೆ.